INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -1, January-February, 2023,
Page No,09 - 23
Peer -Reviewed, Refereed Journal

# ನಿಜಾಂ ಕರ್ನಾಟಕದಲ್ಲಿ ಸಮಾಜವಾದಿ ಮಟಮಾರಿ ನಾಗಪ್ಪನವರ ಕೊಡುಗೆಗಳು

ಸೀತಾರಾಮು.ಎಸ್.[1]

'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ' ಎಂಬುದು ಗಾದೆ. ಈ ಗಾದೆ ಮಾತು ಹೈದರಾಬಾದ್ ಸಂಸ್ಥಾನ ಸ್ವಾತಂತ್ರ್ಯ ಪಡೆಯಲು ಪಟ್ಟ ಪಡಿಪಾಟಲಿಗೆ ಅಕ್ಷರಶಃ ಒಪ್ಪುತ್ತದೆ. ಬ್ರಿಟಿಷರು ದೇಶಕ್ಕೆ ಸ್ವಾತಂತ್ರ್ಯ ಕೊಟ್ಟರೂ ಹೈದರಾಬಾದ್ ನಿಜಾಮ ಪ್ರಭುತ್ವ ಬಿಟ್ಟುಕೊಡಲಿಲ್ಲ. ಆಗ ಎದ್ದ ಹೈದರಾಬಾದ್ ಪ್ರಾಂತ್ಯ ವಿಮೋಚನಾ ಚಳುವಳಿಯ ಮಹಾಪೂರದಲ್ಲಿ ದೊಡ್ಡ ಅಲೆಯಾಗಿ ಹೊರಹೊಮ್ಮಿದವರು ರಾಯಚೂರಿನ ಶ್ರೀ ಎಂ. ನಾಗಪ್ಪ ಅವರು, ಸ್ವಾಭಿಮಾನದ ಕಿಡಿಯಾಗಿ, ನಿರ್ಭೀತಿಯ ಜ್ವಾಲೆಯಾಗಿ, ದೇಶಾಭಿಮಾನದ ಬೆಳಕಾಗಿ ಪ್ರಕಾಶಿಸಿದವರು. ನಮ್ಮ ದೇಶ ಸ್ವತಂತ್ರಗೊಂಡ ಹಿಂದಿನ ದಿನ ರಾತ್ರಿ (14 ಆಗಸ್ಟ್ 47) ನಿಜಾಮ್ ಸರ್ಕಾರದ ಸರ್ಪಗಾವಲನ್ನು ಭೇದಿಸಿ ರಾಯಚೂರಿನ ಸಾತ್ ಕಛೇರಿ ನೆತ್ತಿಯ ಮೇಲೆ ರಾಷ್ಟ್ರಧ್ವಜ ಹಾರಿಸಿದ್ದು ಈ ದೇಶದ ಸ್ವಾತಂತ್ರ್ಯ ಸಂಗ್ರಾಮ ಚರಿತ್ರೆಯ ರೋಚಕ ಅಧ್ಯಾಯಗಳಲ್ಲೊಂದು. ಅಂದಿನ ಆ ಹೋರಾಟದ ಉಗ್ರತೆಯನ್ನು, ರಾಷ್ಟ್ರಾಭಿಮಾನದ ಉಜ್ವಲತೆಯನ್ನು ಇಂದಿಗೂ ಆರದಂತೆ ಉಳಿಸಿ–ಬೆಳೆಸಿಕೊಂಡು ಬಂದಿರುವ ಧೀಮಂತ ವ್ಯಕ್ತಿಯಾಗಿದ್ದಾರೆ ಶ್ರೀ ಎಂ. ನಾಗಪ್ಪನವರು.

**ಬಾಲ್ಯಜೀವನ :**

1927 ಅಕ್ಟೋಬರ್ 3 ರಂದು ರಾಯಚೂರು ಜಿಲ್ಲೆಯ ಅದೇ ತಾಲೂಕಿನ ಹಳ್ಳಿ ಮಟಮಾರಿಯಲ್ಲಿ ಸುಸಂಸ್ಕೃತ ವೀರಶೈವ ಕುಟುಂಬದಲ್ಲಿ ಜನಿಸಿದ ನಾಗಪ್ಪನವರು ಮಧ್ಯಮ ವರ್ಗದ ರೈತ ಮನೆತನಕ್ಕೆ ಸೇರಿದವರು. ತಂದೆ ಬಸಪ್ಪ ತಿಪ್ಪರ, ತಾಯಿ ಈರಮ್ಮ, ಇವರಿಗೆ ಐದು ಜನ ಗಂಡುಮಕ್ಕಳು, ನಾಲ್ಕನೆಯವರು ನಮ್ಮ ನಾಗಪ್ಪನವರು. ತಂದೆಯ ಉದಾರ ಅಂತಃಕರಣ ಹಾಗೂ ದಾನಗುಣ, ತಾಯಿಯ ಸಹನಾಶಕ್ತಿ–ಧೀಶಕ್ತಿಗಳನ್ನು ಚಿಕ್ಕಂದಿನಲ್ಲಿ ಮೈಗೂಡಿಸಿಕೊಂಡು ಬೆಳೆದ ನಾಗಪ್ಪನವರು ಪ್ರಾಥಮಿಕ 2ನೆಯ ತರಗತಿಯನ್ನು ಮಟಮಾರಿಯಲ್ಲಿಯೂ 3ನೆಯ ತರಗತಿಯನ್ನು

[1]. ಸಂಶೋಧನಾ ವಿದ್ಯಾರ್ಥಿ.ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.

ರಾಯಚೂರಿನಲ್ಲಿಯೂ 4ನೆಯ ತರಗತಿಯನ್ನು ಮಂಗಳವಾರ ಪೇಟೆ ಶಾಲೆಯಲ್ಲಿಯೂ ಮುಗಿಸಿ, 5ನೆಯ ತರಗತಿಯಿಂದ ಪ್ರೌಢಶಾಲೆಯ ಕೊನೆಯ ಕ್ಲಾಸಿನವರೆಗೆ (ಎಚ್.ಎಸ್.ಸಿ) ಸರಕಾರಿ ಪ್ರೌಢಶಾಲೆಯಲ್ಲಿ ಪೂರ್ಣಗೊಳಿಸಿದರು.

**ಹೋರಾಟದ ಧ್ವನಿಯಾಗಿ:**

ಶ್ರೀ ನಾಗಪ್ಪನವರು ಹೈಸ್ಕೂಲ್ ಓದುತ್ತಿದ್ದಾಗಲೇ ವಿದ್ಯಾರ್ಥಿ ಮುಖಂಡರಾಗಿ ಆಗ ದೇಶದಲ್ಲಿ ಬಲವಾಗಿ ಬೀಸುತ್ತಿದ್ದ ಸ್ವಾತಂತ್ರ್ಯ ಹೋರಾಟದ ತೆಕ್ಕೆಗೆ ಬಂದರು. ಓದಿನೊಂದಿಗೆ ಹೋರಾಟ, ಸಂಘಟನೆಯೊಂದಿಗೆ ಚಳುವಳಿ ಅವರ ಉಸಿರಾಯ್ತು. ದೇಶಾಭಿಮಾನದ ಕಿಚ್ಚು, ಹೋರಾಟದ ಕೆಚ್ಚು ಅವರಲ್ಲಿ ಎಷ್ಟು ಬಲಿಷ್ಠವಾಗಿತ್ತೆಂದರೆ, ಆಯ್ಕೆಯ ಪ್ರಶ್ನೆ ಬಂದರೆ ಹೋರಾಟ ಮೊದಲು ಅನಂತರ ಓದು ಆಗಿತ್ತು. ಆರ್ಯ ಸಮಾಜದ ಬನ್ಸೀಲಾಲರ ಪ್ರೋತ್ಸಾಹ, ಡಾ. ರಾಮಮನೋಹರ ಲೋಹಿಯಾ ಅವರ Man Kind ಪತ್ರಿಕೆಯ ಸಮಾಜವಾದೀ ವಿಚಾರಧಾರೆಯ ಸ್ಫೂರ್ತಿ, ಆಚಾರ್ಯ ನರೇಂದ್ರದೇವ, ಸ್ವಾಮಿ ರಮಾನಂದ ಮೊದಲಾದವರ ಭಾಷಣಗಳ ಪ್ರಚೋದನೆ, ದಯಾನಂದ ಸರಸ್ವತಿ ಅವರ 'ಸತ್ಯಾರ್ಥ ಪ್ರಕಾಶ' ಕೃತಿಯ ಪ್ರಭಾವ ಈ ಮೊದಲಾದ ಪ್ರೇರಣೆಗಳಿಂದ ನಾಗಪ್ಪನವರ ಯುವಚೈತನ್ಯ ಹುರಿಗೊಂಡಿತು. ಅದೇ ವೇಳೆಗೆ ರಾಯಚೂರಿನಲ್ಲಿ ಅಡವಿರಾವ್ ಫಡ್ನವೀಸ, ನಾರಾಯಣಪ್ಪ ಗಾಣದಾಳ ಮೊದಲಾದವರು ಬ್ರಿಟಿಷ್‌ರ ವಿರುದ್ಧ ಪ್ರತಿಭಟನೆಯ ದನಿ ಎತ್ತಿದ್ದರು. ಇದಕ್ಕೆ ನಾಗಪ್ಪನವರ ಸಿಡಿಲ ಧ್ವನಿಯೂ ಅದಕ್ಕೆ ಸೇರಿತು.

1946 ರಲ್ಲಿ ಹೈಸ್ಕೂಲ್ ಮುಗಿಸಿದ ನಾಗಪ್ಪನವರು ಇಂಟರ್‌ಮೀಡಿಯಟ್ ಓದಿಗೆ ಕಲಬುರ್ಗಿಗೆ ಬರಬೇಕಾಯ್ತು, ಅಲ್ಲಿನ ಸರಕಾರಿ ಕಾಲೇಜಿಗೆ ಸೇರಿ ಇಂಟರ್‌ಮೀಡಿಯಟ್ ಮೊದಲ ವರ್ಷದಲ್ಲಿದ್ದಾಗಲೇ ಹೈದರಾಬಾದ್ ಕರ್ನಾಟಕ ವಲಯ ವಿದ್ಯಾರ್ಥಿ ಸಂಘ ಕಟ್ಟಿ ತಾವು ಅದರ ಸಂಘಟನಾ ಕಾವ್ಯದರ್ಶಿಗಳಾದರು. ನಾಗಪ್ಪನವರು ಕಲಬುರ್ಗಿಗೆ ಬಂದಮೇಲೆ ಅವರ ಸ್ವಾತಂತ್ರ್ಯ ಹೋರಾಟಕ್ಕೆ ಇನ್ನಷ್ಟು ರಭಸ ಬಂತು ಸಮಾಜವಾದಿ ಸಾಹಿತ್ಯದ ಓದು, ರಾಷ್ಟ್ರಮಟ್ಟದ ಸಮಾಜವಾದಿಗಳ ಭಾಷಣಗಳಿಂದ ಪ್ರಭಾವಿತರಾದ ನಾಗಪ್ಪನವರು ಅಖಿಲ ಭಾರತ ಕಾಂಗ್ರೆಸ್‌ನ ಕರೆಯ ಮೇರೆಗೆ 1947 ರಲ್ಲಿ ಕಾಲೇಜು ತೊರದು ಚಳುವಳಿಗೆ ಧುಮುಕಿದರು. ಈ ರಾಷ್ಟ್ರೀಯ ಚಳುವಳಿಯೊಂದಿಗೆ ಹೈದರಾಬಾದ್ ರಾಜ್ಯದ ವಿಮೋಚನಾ ಚಳುವಳಿಯೂ ಮುಂದೆ ಅವರಿಗೆ ಎದುರಾಯಿತು. ನಾಗಪ್ಪನವರು ಕಲಬುರ್ಗಿ ಬಿಟ್ಟು ರಾಯಚೂರಿಗೆ ಬಂದರು.

1947 ಆಗಸ್ಟ್ 8 ರಂದು ರಾಯಚೂರಿಗೆ ಬಂದಿಳಿದ ಶ್ರೀ ನಾಗಪ್ಪನವರು ತಮ್ಮ ಆಪ್ತವಲಯದಲ್ಲಿ ದೇಶಾಭಿಮಾನವನ್ನು ಉಗ್ರಗೊಳಿಸುತ್ತಲೇ, ಸ್ವತಂತ್ರ ನಾಡಿಗೆ ಅಡ್ಡಗಾಲಾಗಿರುವ ಹೈದರಾಬಾದ್ ನಿಜಾಮನ ವಿರುದ್ಧ ವ್ಯಾಪಕ ಅಸಹಕಾರ ಚಳುವಳಿಯ ಯೋಜನೆ ಹೂಡಿದರು. ಬಿ. ಶಂಕರಗೌಡ, ಡಿ. ಪಂಪಣ್ಣ, ಎಂ. ಚಂದ್ರಯ್ಯ, ಶರಭಯ್ಯ ಪರ್ವತ ರೆಡ್ಡಿ ಮೊದಲಾದ ಸ್ನೇಹಿತರನ್ನು ಹೋರಾಟಕ್ಕೆ ಸಜ್ಜುಗೊಳಿಸಿದರು. ದೇಶಕ್ಕೆ ಸ್ವಾತಂತ್ರ್ಯ ಕೊಟ್ಟು ಬ್ರಿಟಿಷರು ತೊಲಗುವದು ಖಚಿತವಾಗಿದ್ದರೂ ಹೈದರಾಬಾದ್ ನಿಜಾಮ ತನ್ನ ಪ್ರಭುತ್ವವನ್ನು ಅಂತ್ಯಗೊಳಿಸಲು ಒಪ್ಪದೆ ಸೆಟೆದು ಕೂತಗ. ನಾಗಪ್ಪನವರು ಕಾರ್ಯಪ್ರವೃತ್ತರಾದರು.

**ಸ್ವಾತಂತ್ರ್ಯ ಶಕ್ತಿಯಾಗಿ :**

ಬೆಳಗಾದರೆ 1947ರ ಆಗಸ್ಟ್ 15, ನಾಗಪ್ಪನವರು 14ರ ರಾತ್ರಿ ಇಡೀ ರಾಯಚೂರು ನಿದ್ದೆಯಲ್ಲಿ ಅದ್ದಿಹೋದ ಹೊತ್ತಿನಲ್ಲಿ ಒಂದಿಬ್ಬರು ಗೆಳೆಯರೊಂದಿಗೆ ಸಾತ್‌ಕಛೇರಿಯತ್ತ ಹೆಜ್ಜೆಯಿಟ್ಟರು. ಕಛೇರಿಯ ನೆತ್ತಿಯ ಮೇಲೆ ನಿಜಾಂ ಸರಕಾರದ ಧ್ವಜ ನಿರುಮ್ಮಳವಾಗಿ ಹಾರಾಡುತ್ತಿದೆ. ಕಟ್ಟಡದ ಸುತ್ತ ಕಾವಲು ಪಡೆಯ ಪಹರ ನಾಗಪ್ಪನವರು ತಮ್ಮ ಸ್ನೇಹಿತರಿಬ್ಬರಿಗೆ ಕೆಳಗೆ ಕಾಯಲು ಹೇಳಿ, ಕಾವಲು ಪೋಲೀಸರ ಸರ್ಪಗಾವಲನ್ನು ಸದ್ದಿಲ್ಲದಂತೆ ಭೇದಿಸಿ ಕತ್ತಲಲ್ಲಿ ಒಳನುಗ್ಗಿ ಮೇಲೇರಿ ನಿಜಾಮನ ಧ್ವಜ ಕಿತ್ತಿ ಆ ಸ್ಥಳದಲ್ಲಿ ಭಾರತದ ತ್ರಿವರ್ಣ ಧ್ವಜ ಊರಿದರು. ಇನ್ನು ತಡ ಮಾಡದ ವಾಯುವೇಗದಿಂದ ಅಲ್ಲಿಂದ ಹೊರಬಿದ್ದರು. ಸುದೈವ, ನಾಗಪ್ಪನವರಿಗೆ ಯವುದೇ ಅಪಾಯ ಅವರನ್ನು ತಡೆಯಲಿಲ್ಲ. ಅಕಸ್ಮಾತ್ ಅವರ ಈ ಪ್ರಯೋಗದಲ್ಲಿ ಸ್ವಲ್ಪವೇ ಎಡವಟ್ಟಾಗಿದ್ದರೂ ಅವರು ಪ್ರಾಣಸಹಿತ ಉಳಿಯುತ್ತಿರಲಿಲ್ಲ. ದೇಶಾಭಿಮಾನದ ಮುಂದೆ ಪ್ರಾಣವೂ ತೃಣವಾಗಿ ಕಂಡಿತು ಅವರಿಗೆ ಸರಿ, ಅಲ್ಲಿಂದ ಮನೆಗೆ ಬಂದರು.ಮನೆಯವರಿಗೆ ಘಟನೆಯನ್ನು ಹೇಳಿದಾಗ ಈ ಭಯಂಕರ ಘಟನೆಯನ್ನು ಕೇಳಿ ಮನೆಯವರು ಹೌಹಾರಿದರು. ಧ್ವಜಾರೋಹಣ ಕೆಲಸಕ್ಕೆ ಸ್ಫೂರ್ತಿ ಕೊಟ್ಟಿದ್ದ ಹೋರಾಟದ ಹಿರಿಯರು ಕೂಡ ನಾಗಪ್ಪನವರನ್ನು ಹತ್ತಿರಕ್ಕೆ ಸೇರಿಸಿಕೊಳ್ಳಲು ನಡುಗಿದರು. ನಾಗಪ್ಪನವರಿಗೆ ತಕ್ಷಣ ಊರು ಬಿಡಲು ಸೂಚಿಸಿದರು. ಗಳಿಗೆಯ ಹಿಂದೆ ಏಕಾಂಗವೀರನಾಗಿ ಕೆಲಸ ಸಾಧಿಸಿದ ನಾಗಪ್ಪನವರಿಗೆ ಈಗ ತಲೆ ಮರೆಸಿಕೊಳ್ಳುವುದು ಅನಿವಾರ್ಯವಾಗಿತ್ತು. ಬೆಳಗಾಗುವದರೊಳಗೆ ನಿಜಾಮನ ನಾಡನ್ನು ದಾಟಬೇಕು. ಕಾಲಹರಣ ಮಾಡದೆ, ತಾವು ಜೊತೆಯಲ್ಲಿ ತಂದಿದ್ದ ನಿಜಾಂ ಸರಕಾರದ ಧ್ವಜವನ್ನು ಚಿಂದಿ ಚಿಂದಿ ಮಾಡಿ ಕಲ್ಲು ಕಟ್ಟಿ ಮಾವಿನಕರ ಹತ್ತಿರದ ಕಾಸ್ ಬಾವಿಯಲ್ಲಿ ಎಸೆದು, ಬೆಟ್ಟವನ್ನು ದಾಟಿ ಹೊಳೆಯನ್ನು ಈಜಿ ತುಂಗಭದ್ರೆಯ ಕಡೆಗೆ ಓಡಿದರು.

ಮರುದಿನ ರಾಯಚೂರಿಗೆ ದಿಗ್ಭ್ರಮೆ ಆವರಿಸಿತ್ತು. ದೇಶದ ಉಳಿದೆಡೆಯಂತ ರಾಯಚೂರಿನ ನೆತ್ತಿಯಲ್ಲೂ ರಾಷ್ಟ್ರಧ್ವಜ ಗರಿಬಿಚ್ಚಿ ಹಾರಾಡುತ್ತಿತ್ತು. ನಿಜಾಂ ಸರಕಾರ ಹಡೆ ತುಳಿದ ಹಾವಾಯಿತು. ಈ ಕೃತ್ಯ

ನಾಗಪ್ಪನವರದೇ ಎಂದು ಗೊತ್ತಾಗಿ ಅವರನ್ನು ಬಂಧಿಸುವ, ಕಂಡಲ್ಲಿ ಗುಂಡಿಡುವ, ಹಿಡಿದುಕೊಟ್ಟವರಿಗೆ ಬಹುಮಾನ ನೀಡುವ ಯೋಜನಗಳು ನಿಜಾಂ ಸರಕಾರದಿಂದ ಹೊರಬಿದ್ದವು.

1947 ಆಗಸ್ಟ್ 14ರ ರಾತ್ರಿ ಊರು ಬಿಟ್ಟ ನಾಗಪ್ಪನವರು ಪುನಃ ಕಾಣಿಸಿಕೊಂಡದ್ದು ಆಂಧ್ರಪ್ರದೇಶದ ವಿಜಯವಾಡದಲ್ಲಿ. ಮುಂದಿನ ಭೂಗತ ಕಾರಾಚರಣೆಗಾಗಿ ಮಿಲಿಟರಿ ತರಬೇತಿ ಪಡೆಯಲು ಅಲ್ಲಿಗೆ ಬಂದಿಳಿದ ಅವರು, ಬಹು ಕಠಿಣವಾಗಿದ್ದ INA. (Indian National Army) ತರಬೇತಿಯನ್ನು ಯಶಸ್ವಿಯಾಗಿ ಮುಗಿಸಿಕೊಂಡು ತುಂಗಭದ್ರಾ (ರಾಯಚೂರಿಗೆ ಸು. 40 ಕಿ. ಮೀ. ದೂರ)ದಲ್ಲಿ ಕ್ಯಾಂಪ್ ಮಾಡಿದರು..

ನಾಗಪ್ಪನವರು ತುಂಗಭದ್ರಾದಲ್ಲಿ ಕ್ಯಾಂಪ್ ತೆರೆದಂತೆ, ನಾರಾಯಣಪೇಟೆ ರಾಘವೇಂದ್ರರಾವ್, ಮಗ್ದುಂ ಮೊದಲಾದವರು ರಾಂಪೂರ (ರಾಯಚೂರು ಹತ್ತಿರ) ದಲ್ಲಿ ಕ್ಯಾಂಪ್ ತೆರೆದರು. ನಾಗಪ್ಪನವರ ಜೊತೆಗೆ ಅವರ ಹಳೆಯ ಹೋರಾಟದ ಮಿತ್ರರು ಸೇರಿಕೊಂಡರು. ನಿಜಾಂ ಸರಕಾರದ ವಿರುದ್ಧ ಅಸಹಕಾರ ಚಳುವಳಿಗೆ ಜನತೆಯನ್ನು ಪ್ರೇರೇಪಿಸುವ ಕಾರ್ಯಕ್ರಮ ಆರಂಭವಾಯಿತು. ನಾಗಪ್ಪನವರ ಹುಟ್ಟಿದೂರು ಮಟಮಾರಿಯಿಂದ ಆರಂಭವಾದ ಈ ಕಾರಾಚರಣೆ ಹಳ್ಳಿ ಹಳ್ಳಿಗಳನ್ನು ಹೊಕ್ಕು ಬಳಸಿತು. ನಿಜಾಂ ಸರಕಾರಕ್ಕೆ ತೆರಿಗೆ ಕೊಡದಿರಲು, ಯಾವುದೇ ರೀತಿಯ ಸಹಕಾರ ನೀಡದಿರಲು ಜನರಿಗೆ ತಿಳಿಸಲಾಯ್ತು. ನಾಗಪ್ಪನವರು ತಮ್ಮ ಸಂಗಾತಿಗಳೊಂದಿಗೆ ದಿನಕ್ಕೆ ಸು. 35–40 ಕಿ.ಮೀ ನಂತೆ ಅಖಂಡ ಎರಡು ತಿಂಗಳು ಕಾಲ ಹಳ್ಳಿ–ಹಳ್ಳಿ ತಿರುಗಿ ಜನರನ್ನು ಸಂಘಟಿಸಿದರು ಸುತ್ತಿದರು.

ಜನತೆಯ ಪ್ರತಿರೋಧ ನಿಜಾಮರಿಗೆ ನುಂಗಲಾರದ ತುತ್ತಾಯಿತು. ಆಗ ಖಾಸಿಂ ರಜವಿ ಎಂಬಾತ ತನ್ನ ಅಧೀನದಲ್ಲಿರುವ ಲಕ್ಷಗಟ್ಟಲೆ ರಜಾಕಾರ ಸೈನ್ಯದಿಂದ ಹೈದರಾಬಾದ ಸಂಸ್ಥಾನದ ಜನತೆಯನ್ನು ಬಗ್ಗು ಬಡಿಯಬಹುದೆಂದು ನಿಜಾಮರಿಗೆ ನಂಬಿಸಿ ದಾಂಧಲೆ ಎಬ್ಬಿಸಿದ. ರಜಾಕಾರರಿಂದ ಮನೆಗಳ ಲೂಟಿ, ಹೆಣ್ಣುಮಕ್ಕಳ ಅಪಹರಣ, ಕೊಲೆ ಸುಲಿಗೆ ಮೇರೆದಪ್ಪಿತು. ನಿಜಾಂ ಸರ್ಕಾರದ ಈ ದೌರ್ಜನ್ಯ, ಅಟ್ಟಹಾಸಗಳಿಗೆ ಬಡಪೆಟ್ಟಿಗೆ ಮಣಿಯಲಾರವು ಎಂಬುದನ್ನು ಮನಗಂಡ ಶ್ರೀ ನಾಗಪ್ಪನವರು ಕರ ನಿರಾಕರಣೆ ಪ್ರಚಾರವನ್ನು ಹಿಂದಿಟ್ಟು, ಪ್ರತಿಹಿಂಸೆಗೆ ಮನಸ್ಸು ಮಾಡುವ ಅನಿವಾರತೆಗಿಳಿದರು. ಸರ್ಕಾರಿ ಪತ್ರಗಳ ನಾಶ, ಸುಂಕದ ಕಟ್ಟೆಗಳ ಮೇಲೆ ದಾಳಿ, ಸಶಸ್ತ್ರ ರಜಾಕಾರರಿಗೆ ಶಸ್ತ್ರಾಸ್ತ್ರಗಳಿಂದಲೇ ಉತ್ತರ ಕೊಡುವ ಭಾರೀ ಯೋಜನೆಯನ್ನು ಹಮ್ಮಿಕೊಂಡರು.

ನಾಗಪ್ಪನವರು ತುಂಗಭದ್ರಾದಲ್ಲಿ 2 ತಿಂಗಳು ಕ್ಯಾಂಪ್ ನಂತರ ಬಾಂಬ್ ಪ್ರಯೋಗದ ತರಬೇತಿಗಾಗಿ ಸೊಲ್ಲಾಪುರಕ್ಕೆ ಹೋದರು. ಆನಂದಗಲ್ ವೆಂಕೋಬರಾವ್ ಸೊಲ್ಲಾಪುರ ತರಬೇತಿಯಲ್ಲಿ

ನಾಗಪ್ಪನವರಿಗೆ ಜೊತೆಗಾರರಾದರು. ನಾಗಪ್ಪನವರು ತರಬೇತಿ ಮುಗಿಸಿಕೊಂಡು ಬಂದಮೇಲೆ, ಇವರ ಸ್ನೇಹಿತ ಪರ್ವತರೆಡ್ಡಿ ಸೊಲ್ಲಾಪುರಕ್ಕೆ ಹೋಗಿ ಪ್ರಯೋಗಕ್ಕಾಗಿ ಅಲ್ಲಿಂದ ಬಾಂಬುಗಳನ್ನು ಹೊತ್ತು ತಂದರು. ನಾಗಪ್ಪನವರ ನಾಯಕತ್ವದಲ್ಲಿ ತುಂಗಭದ್ರಾ ಶಿಬಿರ ಈಗ ಪುನಃ ಮೈ ಕೊಡವಿಕೊಂಡದ್ದು ಸಶಸ್ತ್ರ ಚಟುವಟಿಕೆಗೆ ತೊಡಗಿತು. ಇಂತಹ ಸಾಹಸೀ ಚಟುವಟಿಕೆಗಳಲ್ಲಿ ಮಾನ್ವಿ ತಾಲೂಕಿನ ಎಡಿವಾಳ ಊರಿನಲ್ಲಿ ಸುಂಕದ ಕಟ್ಟೆಯನ್ನು ಸುಟ್ಟಿದ್ದು, ಎಡಗಿನಹಾಳ ತಹಶೀಲ್ದಾರ ಮದನಸಿಂಗ್ ಅವರ ಡೇರೆ ಸುಟ್ಟದ್ದು, ಆ ಮುಂದೆ ವಾರದ ನಂತರ ತುಂಗಭದ್ರಾ ಸೇತುವೆ ಬಳಿ ನಡೆಸಿದ ವಿಫಲ ದಾಳಿ ಮುಖ್ಯವಾದವುಗಳು, ಮೈನವಿರೇಳಿಸುವ ಇಂತಹ ಘಟನೆಗಳನ್ನು ಶ್ರೀ ನಾಗಪ್ಪನವರ ರವರಿಂದ ಕೇಳುವುದೇ ಒಂದು ರೋಮಾಂಚಕಾರಿ ಅನುಭವ.

ಶ್ರೀ ನಾಗಪ್ಪನವರು ಕೊಡುತ್ತಿದ್ದ ಕಿರುಕುಳದಿಂದ ರೋಸಿಹೋದ ನಿಜಾಂ ಸರಕಾರ ಅವರನ್ನು ಬಂಧಿಸಲು ನೆರಳಿನಂತ ಹಿಂಬಾಲಿಸಿತು. ಮದ್ದುಗುಂಡುಗಳೊಂದಿಗೆ ತಲೆಮರೆಸಿಕೊಂಡು ತಿರುಗುತ್ತಿದ್ದ ನಾಗಪ್ಪನವರು ತಮ್ಮ ಸ್ನೇಹಿತರೊಂದಿಗೆ ಕೊನೆಗೊಮ್ಮೆ ಮಟಮಾರಿ ರೈಲ್ವೆ ಸ್ಟೇಶನ್‌ನಲ್ಲಿ ಬಂಧಿತರಾದರು. ನಾಗಪ್ಪನವರೊಂದಿಗೆ ಬಂಧನಕ್ಕೊಳಗಾದವರಲ್ಲಿ ಈಶ್ವರ ರಾಜ್, ವಟಗಲ್ ಬಸವರಾಜಪ್ಪ, ಆಯನೂರ ನರಸಪ್ಪ, ಪನ್ನೂರ ಈರಣ್ಣ ಸೇರಿದ್ದರು. ಇವರೆಲ್ಲರನ್ನು ಬಂಧಿಸಿ ಯರಗೇರಾ ಪೋಲೀಸ್ ಠಾಣೆಗೆ ತಂದು ಲಾಕಪ್ಪಿನಲ್ಲಿ ಇಡಲಾಯಿತು. ಅಲ್ಲಿ ಅಜೀಜುದ್ದೀನ್ ಎಂಬಾತ ಸಬ್ ಇನ್‌ಸ್ಪೆಕ್ಟರ್. ದೇಶ ಒಡೆದಾಗ ಪಾಕಿಸ್ತಾನ ಮೂಲದಿಂದ ವಲಸೆ ಬಂದಿದ್ದ ಈತ, ಕ್ರೌರ್ಯದ ಒಳಗೆ ಕರುಣೆಯನ್ನೂ ಹೊಂದಿದ ವಿಶಿಷ್ಟ ವ್ಯಕ್ತಿಯಾಗಿದ್ದ. ನಾಗಪ್ಪನವರನ್ನು ಯರಗೇರಾ ಠಾಣೆಗೆ ತಂದ ದಿನವೇ ರಾಯಚೂರಿನ ಅಬ್ದುಲ್ ರಜಾಕನ ಕೇಡಿ ಮಗನೂ ಸೆರೆಯಾಗಿ ಬಂದಿದ್ದ. ಅಧಿಕಾರಿ ಅಜೀಜುದ್ದೀನ್ ಠಾಣೆಗೆ ತಲುಪಿದ ಕೂಡಲೇ ಈಚಲ ಜಬರಿಗಳನ್ನು ಪೋಲೀಸರಿಂದ ತರಿಸಿ ಹಾಕಿಸಿದ. ನಾಗಪ್ಪನವರಿಗೆ ತಮ್ಮ ಮೈಸುಲಿಯೋದು ಇನ್ನು ಖಾತ್ರಿ ಎನಿಸಿತು. ಆದರೆ ನಡೆದದ್ದೇ ಬೇರೆ, ಆ ಪೋಲೀಸ್ ಅಧಿಕಾರಿ ರಜಾಕನ ಮಗನನ್ನು ಪಕ್ಕದ ರೂಮಿನಲ್ಲಿ ಕೂಡಿ ಹಾಕಿ ಬೆನ್ನಬಾರೆತ್ತಿದ.ಇದರಿಂದ ನಾಗಪ್ಪನವರು ಪಾರಾದವೆಂದರು.

ಆ ದಿನ ರಾತ್ರಿ ಊಟಕ್ಕೆ ನವಣೆ ಅನ್ನ ಮಾಡಿಸಲಾಗಿತ್ತು. ನಾಗಪ್ಪನವರು ಊಟವನ್ನು ನಿರಾಕರಿಸಿದರು. ಸಬ್‌ಇನ್‌ಸ್ಪೆಕ್ಟರ್ ಅಜೀಜುದ್ದೀನ್ ಅದಕ್ಕೆ ಕೋಪಗೊಳ್ಳದೆ ಅಕ್ಕಿ ಅನ್ನ ಮಾಡಿಸಿ ಹಾಕಿಸಿದ. ಅಲ್ಲದೆ ಮರುದಿನ ನಾಗಪ್ಪನವರನ್ನು ಮತ್ತು ಅವರ ಸಂಗಡಿಗರನ್ನು ತನ್ನೆದುರು ಕೂಡಿಸಿಕೊಂಡು ಓದುವ ವಯಸ್ಸಿನಲ್ಲಿ ಚಳುವಳಿ ಅದು ಇದು ಅಂತಾ ಓಡಾಡಿ ಜೀವನ ಹಾಳು ಮಾಡಿಕೊಳ್ಳೋದು ಬೇಡ ಎಂದು ತಿಳಿ ಹೇಳಿದ. ಓದು ಮುಂದುವರಿಸುವುದಾಗಿ ಒಪ್ಪಿದರೆ ಎಲ್ಲರನ್ನು ಬಿಡುಗಡೆ ಮಾಡುವದಾಗಿ ಹೇಳಿದ. ನಾಗಪ್ಪನವರು ಸುಳ್ಳು ಹೇಳಿ ಪಾರಾಗಬೇಕು ಎನ್ನುವವರಲ್ಲ. ಇದೇ ಹೊತ್ತಿಗೆ ಈ ಕಡೆಗೆ, ನಾಗಪ್ಪನವರು

ದಸ್ತಗಿರಿಯಾಗಿ ಯರಗೇರಾ ಲಾಕಪ್ಪಿನಲ್ಲಿರುವ ಸುದ್ದಿ ತಿಳಿದ ಇವರ ಸ್ನೇಹಿತರು ಪೋಲೀಸ್ ಠಾಣೆಯ ಮೇಲೆ ದಾಳಿ ಮಾಡಿ ಇವರನ್ನು ಬಿಡಿಸಿಕೊಂಡು ಹೋಗುವ ಸಂಚು ಮಾಡಿದರು. ಆದರೆ ಈ ಸ್ನೇಹಿತರ ದುಡುಕಿನಿಂದ ಸಂಚು ಬಯಲಾಗಿ ಪೋಲೀಸ್ ಅಧಿಕಾರಿ ಅಜೀಜುದ್ದೀನ್ ಉರಿದುಹೋದ. ತಾನು ಬಂಧಿಸಿದವರು ಸಾಮಾನ್ಯ .ಹುಡುಗರಲ್ಲ ಎಂದು ತಿಳಿಯುತ್ತಲೇ ಆತ ಬಂದೋಬಸ್ತಿಗೆ ರಾಯಚೂರು ಪೋಲೀಸರ ಸಹಾಯ ಕೇಳಿದ. ಅವರ ಸಹಾಯದಿಂದ ಸಕಲ ಭದ್ರತೆಯ ನಡುವೆ ನಾಗಪ್ಪನವರನ್ನು ಅವರ ತಂಡದೊಂದಿಗೆ ರಾಯಚೂರು ಜೈಲಿಗೆ ತರಲಾಯಿತು. ತನಿಖೆ ನಡೆದು ಪ್ರತ್ಯೇಕವಾಗಿ ಎರಡೆರಡು ತಿಂಗಳಂತೆ ಒಟ್ಟು 4 ತಿಂಗಳು ನಾಗಪ್ಪನವರಿಗೆ ಮತ್ತು ಅವರ ಸಂಗಡಿಗರಿಗೆ ಶಿಕ್ಷೆ ಆಯಿತು. ನಾಗಪ್ಪನವರು ಶಿಕ್ಷೆ ಹೊತ್ತು ಗುಲ್ಬರ್ಗಾ ಬಂದೀಖಾನೆ ಸೇರಿದರು.

ರಾಯಚೂರು ಜೇಲಿನಲ್ಲಿದ್ದಾಗಲೇ ವಂದೇ ಮಾತರಂ ಪಠಣ, ಪ್ರಾರ್ಥನೆ/ಭಜನೆ, ಪತ್ರಿಕೆ ಓದುವುದು, ನಾಟಕವಾಡುವುದು ಇತ್ಯಾದಿ ಗದ್ದಲದೊಂದಿಗೆ ಇದ್ದ ನಾಗಪ್ಪನವರು, ತಮ್ಮ ಈ ಗಲಾಟೆಯಿಂದ ಜೇಲಿನ ಅಧಿಕಾರಿಗಳು ಬೇಸತ್ತು ಬಿಡುಗಡೆ ಮಾಡಿದರೆ ಮತ್ತೆ ಹೋರಾಟ ಮುಂದುವರಿಸಬಹುದು ಎಂದು ಲೆಕ್ಕ ಹಾಕಿದ್ದರು. ಅಂತೆಯೇ ಈ ಗದ್ದಲ ಕಾಯಕವನ್ನು ಗುಲ್ಬರ್ಗಾ ಜೈಲಿನಲ್ಲೂ ಮುಂದುವರಿಸಿದರು.

ಗುಲ್ಬರ್ಗಾ ಜೈಲಿನಲ್ಲಿ ನಾಗಪ್ಪನವರಿಗೆ ಸ್ವಾಮಿ ರಮಾನಂದ ತೀರ್ಥರು ಜೊತೆಯಾದರು. ಕಾಂಗ್ರೆಸ್ಸಿನ ಶ್ರೀ ರಮಾನಂದರು ಅಹಿಂಸಾ ಚಳುವಳಿಗೆ, ವಾಕ್ಚಟುತ್ವಕ್ಕೆ ಹೆಸರಾದವರು. ಇವರು ಮಾತ್ರವಲ್ಲದೆ, ನಾಗಪ್ಪನವರನ್ನು ಕೂಡಿ ಹಾಕಿದ್ದ ಜೈಲಿನಲ್ಲಿ ಸುಮಾರು 3000 ಜನ ಯುವ ಹೋರಾಟಗಾರರೇ ತುಂಬಿದ್ದರು. ಇವರಲ್ಲಿ ಕಮ್ಯುನಿಷ್ಟರೂ ಸೇರಿದ್ದರು.

ಇದೇ ಹೊತ್ತಿಗೆ ಇದೇ ಜೈಲಿನಲ್ಲಿದ್ದ ಭೀಮಸೇನರಾವ್ ದೇಸಾಯಿ ಎಂಬುವರು (ಅನಿರುದ್ಧ ದೇಸಾಯರ ಸಮೀಪದ ಬಂಧು) ಪೋಲೀಸರ ಬಡಿತದಲ್ಲಿ ಸಾವನ್ನಪ್ಪಿದರು. ಸತ್ಯಾಗ್ರಹಿಗಳೆಲ್ಲ ಕೆರಳಿದರು. ಈ ಅಸಹಜ ಸಾವಿನ ವಿರುದ್ಧ, ನಿಜಾಂ ಸರಕಾರದ ಪೋಲೀಸ್ ದೌರ್ಜನ್ಯದ ವಿರುದ್ಧ ನಾಗಪ್ಪನವರು ಜೊತೆಗಾರರೊಂದಿಗೆ ಹರತಾಳ ಎಬ್ಬಿಸಿದರು. ಆಕ್ರೋಶ ಮುಗಿಲು ಮುಟ್ಟಿತು. ರಮಾನಂದರೇ ಮುಂದಾಗಿ ಸಮಾಧಾನ ಮಾಡಿದ ಮೇಲೆ ಎಲ್ಲಶಾಂತವಾಗಿ ರಾತ್ರಿ ದೇಸಾಯರ ಶವಸಂಸ್ಕಾರ ನಡೆಯಿತು.

ಜೈಲಿನಲ್ಲಿ ನಾಗಪ್ಪನವರು ಏಳಿಸುತ್ತಿದ್ದ ಗಲಾಟೆಗಳು ಕೇವಲ ಒಣ ಆವೇಶದವು ಆಗಿರಲಿಲ್ಲ. ಅವರ ಕೂಗು, ಆಕ್ರೋಶಗಳ ಹಿಂದೆ ನ್ಯಾಯದ ಸೊಲ್ಲು, ಅರ್ಥಪೂರ್ಣ ಹಿನ್ನೆಲೆ ಯಾವತ್ತೂ ಇರುತ್ತಿತ್ತು. ಮಾದರಿಗೆ ಕೆಳಗಿನ  ಈ ಘಟನೆ ನಿದರ್ಶನವಾಗಿದೆ.

ಆ ದಿನ ಹೈದರಾಬಾದ್ ನಿಜಾಮನ ಹುಟ್ಟಿದ ಹಬ್ಬ, ಆ ಪ್ರಯುಕ್ತ ಜೇಲಿನ ಬಂಧಿಗಳಿಗೆ ಸಿಹಿ ಹಂಚುವ ಕಾರಕ್ರಮ, ನಾಗಪ್ಪನವರು ಚಳುವಳಿಗಾರರೊಂದಿಗೆ ಚರ್ಚಿಸಿ ಸಿಹಿ ಊಟವನ್ನು ಬಹಿಷ್ಕರಿಸುವ ನಿರ್ಧಾರ ತೆಗೆದುಕೊಂಡರು. ಸಿಹಿ ಮುಟ್ಟಲಿಲ್ಲ. ಆದರೆ ಅದೇ ಜೇಲಿನಲ್ಲಿದ್ದ ಕ್ರಿಮಿನಲ್ ಅಪರಾಧಿಗಳಿಗೆ ಆ ಸಿಹಿಯ ಮೇಲೆ ಆಸೆ. ನಾಗಪ್ಪನವರ ದೇಶಾಭಿಮಾನದ ಹಿನ್ನೆಲೆ ಆ ಚಪಲಚಿತ್ತರಿಗೆ ಹೇಗೆ ಅರ್ಥವಾಗಬೇಕು? ಸಿಹಿಯ ಬಹಿಷ್ಕಾರ, ತಮ್ಮನ್ನು ಗುಲಾಮರೆಂದು ತಿಳಿದಿರುವ ಆ ನಿಜಾಮನಿಗೆ ಹಾಕುವ ಧಿಕ್ಕಾರ ಎಂದು ಅಪರಾಧಿಗಳಿಗೆ ಹೊಳೆಯದು. ಅಂತೆಯೇ ಅವರು ತಿನ್ನಲು ಒಪ್ಪಿ ಇನ್ನೇನು ಹಂಚಬೇಕು ಎನ್ನುವಾಗ ಬಿರುಗಾಳಿಯಂತೆ ನುಗ್ಗಿದ ನಾಗಪ್ಪನವರು ಸಿಹಿ ತಿಂಡಿಯ ಬುಟ್ಟಿಗಳನ್ನು ಬೀಳಿಸಿ, ಸಿಹಿಯನ್ನು ನೆಲಕ್ಕೆ ಹಾಕಿದರು. ಎಲ್ಲ ಮಣ್ಣಾಯಿತು. ನಿಜಾಮನ ಹಬ್ಬವನ್ನು ಹೀಗೆ ಹಸಗೆಡಿಸಿದ ನಾಗಪ್ಪನವರ ಈ ವರ್ತನೆ ಎಷ್ಟು ಅರ್ಥಪೂರ್ಣವೂ ಸಾಂಕೇತಿಕವೂ ಆಗಿದೆ ಎಂಬುದನ್ನು ಪ್ರಾಜ್ಞರಿಗೆ ಪ್ರತ್ಯೇಕ ವಿವರಿಸಬೇಕಿಲ್ಲ.

ನಾಗಪ್ಪನವರ ಪ್ರತಿರೋಧ ಹೀಗೆ ಮುಂದುವರಿಯುತ್ತಿದ್ದಾಗಲೇ ಒಂದು ದಿನ ಬಂದೀಖಾನೆ ಪರಿಶೀಲನೆಗೆ ಜಹೀರ್ ಅಹಮ್ಮದ್ ಎಂಬ ಗೃಹಕಾರ್ಯದರ್ಶಿ ಗುಲ್ಬರ್ಗಾ ಜೇಲಿಗೆ ಬಂದು ಸಾಲಾಗಿ ನಿಂತ ಬಂಧಿತರಲ್ಲಿ ನಾಗಪ್ಪನವರನ್ನು ನೋಡಿ ಆತನಿಗೆ ಏನನ್ನಿಸಿತೋ ತಿಳಿಯದು, ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆ ಜೇಲಿನ ಅಧಿಕಾರಿಗಳಿಗೆ ಆದೇಶಿಸಿದ. ಪ್ರಾಯಶಃ ನಾಗಪ್ಪನವರು ಪ್ರಾಯದಿಂದ ಚಿಕ್ಕವರು ಎಂಬ ಅಂಶ ಆತನಿಗೆ ಹೊಳೆದು, ಇಂಥ ಮಾನವೀಯ ನಿರ್ಧಾರಕ್ಕೆ ಆತ ಬರಲು ಕಾರಣವಾಗಿರಬೇಕು. ನಾಗಪ್ಪನವರು, ಜೊತೆಗೆ ಅವರ ವಯೋಮಾನದ ಇನ್ನೂ 7 ಜನ ಜೈಲಿನಿಂದ ಹೀಗೆ ಬಿಡುಗಡೆಯಾದರು.

ಜೈಲಿನಿಂದ ಬಿಡುಗಡೆಯಾದ ಎಂಟನೆಯ ದಿನಕ್ಕೆ ನಾಗಪ್ಪನವರು ಮತ್ತ ತುಂಗಭದ್ರಾ ಕ್ಯಾಂಪಿಗೆ ಮರಳಿದವರು, ಅಲ್ಲಿದ್ದ ಸ್ನೇಹಿತರನ್ನು ಹೊರಡಿಸಿಕೊಂಡು ಆದವಾನಿ ಕ್ಯಾಂಪಿಗೆ ಬಂದಿಳಿದರು. ಇವರ ಜೊತೆಗೆ ಡಿ. ಪಂಪಣ್ಣ, ವೀರನಗೌಡ, ಬೆಟ್ಟದೂರು ಶಂಕರಗೌಡ, ನರಸಪ್ಪ, ಪರ್ವತರೆಡ್ಡಿ ಮೊದಲಾದವರಿದ್ದರು. ಎಲ್ಲರೂ ಸೇರಿ ನಾಗಲದಿನ್ನಿಗೆ ಬಂದರು. ನಾಗಲದಿನ್ನಿ ಹೊಳೆ ಆಚೆಗೆ ರಾಜಾಪುರ. ಅದು ರಜಾಕಾರರ ನೆಲೆ. ಅದರ ನಾಶಕ್ಕೆ, ಹೊಳೆ ದಾಟಿ ರಾತ್ರೋರಾತ್ರಿ ರಾಜಾಪುರ ಸೇರಿ ಉಂಡು ಮಲಗಿದ ಹೊತ್ತಿಗೆ, ಆದವಾನಿಯಿಂದ ಇವರ ಮೇಲೆ ಸಂಶಯ ತಾಳಿ ಬಂದಿದ್ದ ಮದ್ರಾಸ್ ಪ್ರಾಂತದ ಪೋಲೀಸರ ಕೈಗೆ ಸಿಕ್ಕುಬಿದ್ದರು. ಅವರು ಶಸ್ತ್ರಾಸ್ತ್ರ ಸಹಿತ ಇವರನ್ನು ಬಂಧಿಸಿ ಎಮ್ಮಿಗನೂರು ಪೋಲೀಸ್ ಠಾಣೆಗೆ ಕರೆತಂದರು, ತನಿಖೆ ನಡೆಸಲು ಎಮ್ಮಿಗನೂರು ಜೇಲಿನಲ್ಲಿಟ್ಟರು. ತಿಂಗಳು ಕಳೆಯಿತು. ಜೇಲಿನಲ್ಲಿ ಪ್ರಾರ್ಥನೆ, ಭಜನೆ, ಅಸಹಕಾರ ನಡೆದೇ ಇದ್ದವು. ಧಾರವಾಡ 'ಮಿಂಚಿನ ಬಳ್ಳಿ' ಪ್ರಕಾಶನದ ಸಾಹಿತಿ

ಬುರ್ಲಿ ಬಿಂದು ಮಾಧವ ಅವರ ಪತ್ನಿ ಇವರಿಗೆ ಊಟ ತಂದುಕೊಟ್ಟು ಉಪಚರಿಸುತ್ತಿದ್ದರು. ಕೊನೆಗೊಮ್ಮೆ ಈ ಬಂಧಿತರು ಸ್ವಾತಂತ್ರ್ಯಹೋರಾಟಗಾರರು ಎಂದು ತಿಳಿದು ಇವರನ್ನು ಜೈಲಿನಿಂದ ಬಿಡುಗಡೆ ಮಾಡಿದರು.

ನಾಗಪ್ಪನವರು ಜೇಲಿನಿಂದ ಹೊರ ಬರುವ ವೇಳೆಗೆ ಹೈದರಾಬಾದ್ ಸಂಸ್ಥಾನಕ್ಕೆ ಹೊರಗಿನಿಂದ ಆರ್ಥಿಕ ದಿಗ್ಧಂಧನ ವಿಧಿಸಲಾಗಿತ್ತು. ಹೈದರಾಬಾದ್ ಕಡೆಗೆ ಕಳ್ಳತನದಿಂದ ಸಾಗಿಸುತ್ತಿದ್ದ ಮಾಲನ್ನು ಪತ್ತೆ ಹಚ್ಚಿ ನಿರ್ಬಂಧಿಸುವ ಜವಾಬ್ದಾರಿಯನ್ನು, ಸ್ವತಂತ್ರ ಭಾರತ ಸರ್ಕಾರ ನಾಗಪ್ಪನವರಿಗೆ ವಹಿಸಿಕೊಟ್ಟಿತು. ಒಂದು ಸಲ, ಒಂದು ಲಕ್ಷ ರೂಪಾಯಿಗಳನ್ನು ಹೊಟ್ಟೆಗೆ ಕಟ್ಟಿಕೊಂಡು ಹೈದರಾಬಾದಿಗೆ ಪ್ರಯಾಣಿಸುತ್ತಿದ್ದ ವ್ಯಕ್ತಿಯೊಬ್ಬ ನಾಗಪ್ಪನವರ ಕೈಗೆ ಸಿಕ್ಕಿಬಿದ್ದ. ಹಣ ತೆಗೆದುಕೊಂಡು ತನ್ನನ್ನು ಬಿಟ್ಟುಬಿಡಲು ಆತ ಅಂಗಲಾಚಿದ. ನಾಗಪ್ಪನವರು ಮನಸ್ಸು ಮಾಡಿದ್ದರೆ, ಆ ಕಾಲಕ್ಕೆ ಅಷ್ಟು ಹಣವನ್ನು ಸಲೀಸಾಗಿ ತಮ್ಮ ಜೇಬಿಗಿಳಿಸಬಹುದಿತ್ತು. ಆದರೆ ಶುದ್ಧ ಚಾರಿತ್ರ್ಯದ, ಶುದ್ಧ ಹಸ್ತದ ಸತ್ಯಾಗ್ರಹಿ ಅವರಾದುದರಿಂದ, ಅವರೆಂದೂ ನೈತಿಕವಾಗಿ ಎಡವಲಿಲ್ಲ. ಯಾವತ್ತಿಗೂ ಅವರು ತಮ್ಮದಲ್ಲದ್ದನ್ನು ಕಣ್ಣೆತ್ತಿ ನೋಡದ ನಿಷ್ಕಳಂಕರು.

ಆದೋನಿಯಲ್ಲಿ ಒಂದು ತಿಂಗಳು ಇಪ್ಪತ್ತು ದಿನಗಳ ಕಾಲ ನಡೆದ 'ಆರ್ಥಿಕ ದಿಗ್ಬಂಧನ' ನಂತರ, ಕೊನೆಗೊಮ್ಮೆ ಹೈದರಾಬಾದ್ ನಿಜಾಮನ ಮೊಂಡಾಟ ಹಾಗೂ ನವಾಬಗಿರಿಯನ್ನು ಮುರಿಯಲು ಸ್ವತಂತ್ರ ಭಾರತದ ಗೃಹಮಂತ್ರಿ ಶ್ರೀ ವಲ್ಲಭಭಾಯಿ ಪಟೇಲರು ಸೇನೆ ಬಳಸಿ ಹೈದರಾಬಾದ್ ಸಂಸ್ಥಾನವನ್ನು ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸಿದರು.

**ಹೋರಾಟ ನಿಲ್ಲಿಸಿ ಮತ್ತೆ ಓದಿಗೆ :**

ಹೈದರಾಬಾದ್ ಸಂಸ್ಥಾನ ಸ್ವತಂತ್ರವಾಗಿ, ಸ್ವತಂತ್ರ ಭಾರತದ ಅಖಂಡತೆಯ ಪ್ರವಾಹದಲ್ಲಿ ಏಕವಾಗಿ ಸೇರಿಹೋದಮೇಲೆ, ವಿಮೋಚನಾ ಚಳುವಳಿಯಲ್ಲಿ ತೊಡಗಿದ್ದ ಅನೇಕ ಸಂಘಟನೆಗಳ ಹಾಗೆ, ವಿದ್ಯಾರ್ಥಿ ಸಂಘಟನೆಗಳು ತಮ್ಮ ಹೋರಾಟ ನಿಲ್ಲಿಸಿ ಪ್ರಜಾಪ್ರಭುತ್ವದ ಮುಕ್ತ ಬಾಳಿಗೆ ಮರಳಿದವು. ಶ್ರೀ ನಾಗಪ್ಪನವರು ಸತ್ಯಾಗ್ರಹ ಕಾರಣದಿಂದ ಅರ್ಧಕ್ಕೆ ನಿಲ್ಲಿಸಿದ್ದ ಎರಡು ವರ್ಷಗಳ ಇಂಟರ್‌ಮೀಡಿಯೇಟ್ ಅಭ್ಯಾಸವನ್ನು ಒಂದೇ ವರ್ಷದಲ್ಲಿ ಓದಿ ಪಾಸಾಗುವ ಅನುಕೂಲ ದೊರೆತು ತೇರ್ಗಡೆಯಾದರು. ಓದು ನಿಲ್ಲಿಸಿ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿದ್ದ ಹೋರಾಟಗಾರರಿಗೆ ಈ ಅನುಕೂಲ ಪ್ರಾಪ್ತವಾಗಿತ್ತು. ನಿಜಾಂ ಆಡಳಿತದಲ್ಲಿ ಉರ್ದು ಮಾಧ್ಯಮ ಇದ್ದದ್ದು ಈಗ ಇಂಗ್ಲೀಷ್ ಮಾಧ್ಯಮವಾಗಿ ಬದಲಾಯ್ತು.

ಇಂಟರ್ ಮೀಡಿಯೇಟ್ ಪಾಸಾಗಿ ಬಿ.ಎ. ಮುಗಿಸಿದ ನಾಗಪ್ಪನವರಿಗೆ ಡೆಪ್ಯೂಟಿ ತಹಶೀಲ್ದಾರ್ ಹುದ್ದೆ ಕಾದಿತ್ತು. ನೇಮಕಾತಿ ಆದೇಶದಂತೆ ಸಿಂಧನೂರಿಗೆ ಹೋಗದೆ ಸೇವೆಯಲ್ಲಿ ಇರುವ ಇಷ್ಟವಿಲ್ಲದೆ ಅದಕ್ಕೆ ರಾಜೀನಾಮೆ ಕೊಟ್ಟು, ಅಂತರಂಗದ ಅಭೀಷ್ಟೆಯಂತೆ 1951ರಲ್ಲಿ ಕಾನೂನು ವ್ಯಾಸಂಗಕ್ಕೆ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ತೆರಳಿದರು. ಎರಡು ವರ್ಷದ ಕಾನೂನು ಪರೀಕ್ಷೆಯನ್ನು 1952ರಲ್ಲಿ ತೇರ್ಗಡೆಯಾಗಿ ವಕೀಲವೃತ್ತಿ ಕೈಗೊಳ್ಳಲು ರಾಯಚೂರಿಗೆ ಬಂದರು.

ಈ ಮಧ್ಯೆ ಕಾಯ್ದೆ ಅಭ್ಯಾಸದ ಮೊದಲ ವರ್ಷದಲ್ಲಿದ್ದಾಗಲೇ, ಅಂದರೆ 1951 ರಲ್ಲಿ ರಾಯಚೂರು ಪುರಸಭೆ ಚುನಾವಣೆಗೆ ಸ್ಪರ್ಧಿಸಿ ಆರಿಸಿಬಂದಿದ್ದರು. ಸಮಾಜವಾದಿ ಪಕ್ಷದಿಂದ ತಾವು ಮಾತ್ರವಲ್ಲದೆ, ಬೀಸಯ್ಯ ಎಂಬ ಹರಿಜನ ವ್ಯಕ್ತಿಯನ್ನು ರಾಯಚೂರಿನ ಪ್ರಭಾವಿ ವ್ಯಕ್ತಿ ಡಿ. ಮಾಣಿಕರಾವ್ ವಕೀಲರ ವಿರುದ್ಧ ನಿಲ್ಲಿಸಿ 700 ಮತಗಳ ಅಂತರದಿಂದ ಗೆಲ್ಲಿಸಿದರು. ಕೆಳವರ್ಗದವರ ಕುರಿತು ನಾಗಪ್ಪನವರ ಕಳಕಳಿ, ಪ್ರತಿಷ್ಠಿತರನ್ನು ಎದುರು ಹಾಕಿಕೊಂಡು ಈಸುವ ಅವರ ಧೈರ ಇಲ್ಲಿ ವ್ಯಕ್ತವಾಗುತ್ತದೆ. 1967ರ ಚುನಾವಣೆಯಲ್ಲಿ ಗ್ವಾಲಿಯ ಕ್ಷೇತ್ರದಲ್ಲಿ ಡಾ. ಲೋಹಿಯಾ ಅವರು ಅಲ್ಲಿನ ಮಹಾರಾಣಿ ವಿಜಯರಾಜೇ ಸಿಂಧಿಯಾ ವಿರುದ್ಧ ಜಾಡಮಾಲಿ ಮಹಿಳೆಯನ್ನು ನಿಲ್ಲಿಸಿದ ಹಾಗೆ, ಅವರಿಗಿಂತ ಮೊದಲು ಇಲ್ಲಿ ನಾಗಪ್ಪನವರು ಜನಪ್ರಿಯ ವ್ಯಕ್ತಿಯ ವಿರುದ್ಧ ಹರಿಜನ ವ್ಯಕ್ತಿಯನ್ನು ನಿಲ್ಲಿಸಿದ್ದು ಗಮನಾರ್ಹವಾಗಿದೆ. ಈ ಸಂದರ್ಭದಲ್ಲಿ ಒಂದು ದುರ್ಘಟನೆ ಸಂಭವಿಸಿತು. ಹರಿಜನ ವ್ಯಕ್ತಿ ಬೀಸಯ್ಯ ಚುನಾವಣೆಗೆ ಸ್ಪರ್ಧಿಸಿದ್ದಕ್ಕೆ ಕಾಂಗ್ರೆಸ್‌ನವರು ಬೀಸಯ್ಯನ ತಂದೆಯ ಕೈ–ಕಾಲು ಮುರಿದರು. ನಾಗಪ್ಪನವರು ಈ ಇಡೀ ಘಟನೆಯನ್ನು ಖಂಡಿಸಿ ಕಾಂಗ್ರೆಸ್ ಮಂತ್ರಿಯೊಬ್ಬನನ್ನು ರಾಯಚೂರಿನಲ್ಲಿ ಘೇರಾವ್ ಮಾಡಿದರು. ಮೊದಲು ಕಾಂಗ್ರೆಸ್‌ನಲ್ಲಿದ್ದು ಈ ದುರ್ಘಟನೆಯಿಂದ ಖಿನ್ನರಾದ ಡಾ. ರಾಮಕೃಷ್ಣ ಎಂಬುವರು ಕಾಂಗ್ರೆಸ್ ಬಿಟ್ಟುಬಿಟ್ಟರು. ನಾಗಪ್ಪನವರು ಆ ಸಲ ಡಾ. ರಾಮಕೃಷ್ಣ ಅವರನ್ನೇ ಪುರಸಭೆ ಅಧ್ಯಕ್ಷರನ್ನಾಗಿ ಮಾಡಿದರು.

1952 ರಲ್ಲಿ ನಾಗಪ್ಪನವರು ಕಾನೂನು ಓದು ಪೂರ್ಣಗೊಳಿಸಿ ವಕಾಲತ್ತಿನ ಪ್ರಾಕ್ಟಿಸಿಗೆ ರಾಯಚೂರಿಗೆ ಬಂದಾಗ ಶ್ರೀ ಖಾಜಿ ಅಬ್ದುಲ್ ರಫ್ ಎಂಬುವರು ಅವರಿಗೆ “ವಕೀಲ ವೃತ್ತಿ ಬೇಡ, ನೌಕರಿ ಮಾಡಿರಿ’ ಎಂದರು. ಕೈಯೊಳಗಿನ ಒಳ್ಳೆಯ ನೌಕರಿ ತೊರೆದು ಕಾನೂನು ಓದಿಗೆ ಹೋಗಿದ್ದ ನಾಗಪ್ಪನವರು ಮತ್ತೆ ನೌಕರಿಗೆ ಸೇರುವ ಪ್ರಮೇಯವಿರಲಿಲ್ಲ. ಕೊನೆಗೆ ಶ್ರೀ ಸಯ್ಯದ್ ನಜೀರುಲ್ಲ ಹಸನ್ ರಜವಿ ಅವರು ನಾಗಪ್ಪನವರಿಗೆ ಸೀನಿಯ ಆದರು. ಮುಂದೆ ನಾಗಪ್ಪನವರು ಸ್ವತಂತ್ರವಾಗಿ ವಕಾಲತ್ತು ಆರಂಭಿಸಿದ್ದೂ ಒಂದು ಕಥೆಯಾಯಿತು.

**ಶ್ರಮಜೀವಿಗಳ ಸಂಘಟನೆಯ ನೇತಾರ :** ಅಪ್ಪಟ ಸಮಾಜವಾದಿಗಳಾದ ಶ್ರೀ ನಾಗಪ್ಪನವರು ಹಿಂದುಳಿದವರ ಬಗೆಗೆ, ತುಳಿತಕ್ಕೆ ಒಳಗಾದವರ ಬಗೆಗೆ ಸಹಜವಾಗಿ ಅನುಕಂಪ ಔದಾರಗಳನ್ನು ಹೊಂದಿದವರಾಗಿದ್ದರು. 1948 ರಿಂದ 1968ರ ವರೆಗೆ ರಾಯಚೂರು ಪುರಸಭೆ ನೌಕರರ ಸಂಘದ ಅಧ್ಯಕ್ಷರಾಗಿದ್ದರು ನಾಗಪ್ಪನವರು. ರಾಯಚೂರಿನಲ್ಲಿ ಪ್ರಥಮತಃ ಪುರಸಭೆ ನೌಕರರ ಸಂಘ ಕಟ್ಟಿದವರೇ ಶ್ರೀ ನಾಗಪ್ಪನವರು. ರೈಲ್ವೆ ಮತ್ತು ರಸ್ತೆ ಸಾರಿಗೆ ನೌಕರರ ಸಂಘದ ಅಧ್ಯಕ್ಷರಾಗಿರುವ ಅವರು 'ರಾಯಚೂರು ಜಿಲ್ಲಾ ಗುಮಾಸ್ತರ ಸಂಘ' ವನ್ನು ಸ್ಥಾಪಿಸಿದರು. ಗಂಜ್, ಬಟ್ಟೆ–ಕಿರಾಣಿ ಸರಾಫ್ ಮೊದಲಾದ ಅಂಗಡಿಗಳ ಗುಮಾಸ್ತರುಗಳನ್ನು ಸಂಘಟಿಸಿ, ದೊಡ್ಡ ಮೆರವಣಿಗೆ ತೆಗೆದು ವೇತನ ಹೆಚ್ಚಳಕ್ಕೆ ಹೋರಾಡಿದ್ದು ಅಭೂತಪೂರ್ವವಾಗಿದೆ. 1964 ರಿಂದ ಇಲ್ಲಿನವರೆಗೆ 'ಗಂಜಿನ ಹಮಾಲರ ಸಂಘ'ದ ಅಧ್ಯಕ್ಷರಾಗಿದ್ದ ಅವರು, ಜಿಲ್ಲೆಯ ಕಾರ್ಮಿಕರ ಸಂಘಟನೆಗೆ ಅಹೋರಾತ್ರಿ ಶ್ರಮಿಸಿದವರು. ಶ್ರೀ ನಾಗಪ್ಪನವರು 1948ರಲ್ಲಿ ರಾಯಚೂರು ಪುರಸಭೆ ನೌಕರರ ಸಂಘದ ಅಧ್ಯಕ್ಷರಾದ ಮೇಲೆ ಪ್ರಧಾನಿ ನೆಹರೂ ಅವರು ಒಮ್ಮೆ ರಾಯಚೂರಿಗೆ ಬಂದಿದ್ದರು (1951ರಲ್ಲಿ), ಆಗ ನಾಗಪ್ಪನವರು ಪುರಸಭೆ ಜಾಡಮಾಲಿಗಳ ವಸತಿ ಸೌಕರ್ಯಕ್ಕೆ ಒತ್ತಾಯಿಸಿ ಅವರೆದುರು ಪ್ರದರ್ಶನ ನಡೆಸಿದರು. ಸ್ಥಳದಲ್ಲಿಯೇ ಅಂಗೀಕಾರವಾಯ್ತು. ಈಗ ಪೋಲೀಸ್ ಕಾಲನಿ ಇರುವ ಸ್ಥಳದಲ್ಲಿ ಆಗ ಜಾಡಮಾಲಿಗಳ ವಸತಿಗಾಗಿ ಕಟ್ಟಡಗಳು ಎದ್ದವು. ಆದರೆ ಗುಡಿಸಲುಗಳಿಗೆ ಒಗ್ಗಿಹೋಗಿದ್ದ ಈ ಜನ ಆ ಮನೆಗಳಿಗೆ ಹೋಗಲಿಲ್ಲ. (ಈ ಗುಡಿಸಲುಗಳನ್ನು (ಸು, 200) ಹಾಕಿಸಿದವರು ಶ್ರೀ ನಾಗಪ್ಪನವರೇ, ಮತ್ತು ಈ ಗುಡಿಸಲುವಾಸಿಗಳ ಓಣಿಗೆ ನಾಗಪ್ಪನವರು 'ಲೋಹಿಯಾ ನಗರ' ಎಂದು ಹೆಸರಿಟ್ಟಿದ್ದರು.)

'ಪುರಸಭೆ ನೌಕರರ ಸಂಘ'ದ ಅಧ್ಯಕ್ಷರಾಗಿ ಶ್ರೀ ನಾಗಪ್ಪನವರು ಆ ನೌಕರರಿಗೆ ಮಾಡಿದ ಸಹಾಯ ಉಲ್ಲೇಖನೀಯವಾಗಿದೆ. ಪುರಸಭೆ ಕೂಲಿಕಾರರು ಖಾಸಗಿಸಾಲ ರೂ. 100/– ಕ್ಕೆ ಶೇಕಡ ಹತ್ತರಿಂದ ಇಪ್ಪತ್ತರಂತ ಬಡ್ಡಿ ತರುತ್ತಿದ್ದರು. ಸಾಲದ ಭಾರ ಹೆಚ್ಚಾಗಿ ಇವರು ಹಿಂದಿರುಗಿಸದೆ ಹೋದಾಗ ಸಾಲ ಕೊಟ್ಟಾತ ಸಾಲಗಾರನ ಹೆಂಡಿರನ್ನು ಒಯ್ದು ತನ್ನ ಮನೆಯಲ್ಲಿ ಒತ್ತೆಯಾಗಿ ಇಟ್ಟುಕೊಳ್ಳುತ್ತಿದ್ದ. ಈ ಅಮಾನುಷ ಕೃತ್ಯವನ್ನು ಖಂಡಿಸಿ ಶ್ರೀ ನಾಗಪ್ಪನವರು ರಾಯಚೂರು ಪುರಸಭೆಯಿಂದ ಒಂದು ಲಕ್ಷ ರೂಪಾಯಿಗಳನ್ನು ಬಡ್ಡಿ ರಹಿತ ಸಾಲ ಕೊಡಿಸಿದ್ದು ಮಾತ್ರವಲ್ಲದೆ, ಪುರಸಭೆ ಕೂಲಿಕಾರರ ಪಗಾರದಲ್ಲಿ ತಿಂಗಳಿಗೆ ಐದು ಇಲ್ಲವೆ ಹತ್ತು ರೂಪಾಯಿಗಳನ್ನು ಕಡಿತ ಮಾಡಿಸಿ ಅವರು ತೆಗೆದುಕೊಂಡ ಸಾಲದ ಹಣವನ್ನೆಲ್ಲ ಮರುಪಾವತಿ ಮಾಡಿಸಿದರು. ಇದರಿಂದ ದುಸ್ಸಾಧ್ಯವಾಗಿದ್ದ ಕೂಲಿಕಾರರ ಸಾಲದ ಭಾರ ಇಳಿದುದಲ್ಲದೆ, ಒತ್ತೆಯ ಅವಮಾನದಿಂದ ಬಿಡುಗಡೆ ಆದಂತಾಯಿತು.

ಪುರಸಭೆ ನೌಕರರ ಕೂಲಿಯನ್ನು ಸರ್ಕಾರಿ ರೀತ್ಯ ಹೆಚ್ಚಳಗೊಳಿಸಲು ಹೋರಾಡಿ ಗೆದ್ದ ನಾಗಪ್ಪನವರು 1955ರಲ್ಲಿ ಹೈದರಾಬಾದ ಪ್ರಾಂತದ ಪುರಸಭೆ ನೌಕರರ 'ಕನಿಷ್ಠ ವೇತನ ಸಮಿತಿ'ಯ ಸದಸ್ಯರಾಗಿದ್ದರು (ಆಗ ಪದ್ಮಜಾ ನಾಯ್ಡು ಈ ಸಮಿತಿಯ ಚೇರನ್ ಆಗಿದ್ದರು) ಮುಂದೆ 1958ರಲ್ಲಿ ಮೈಸೂರು ರಾಜ್ಯ ನಿರಾಣವಾದ ಮೇಲೆ ಇಲ್ಲಿನ 'ಕನಿಷ್ಠ ವೇತನ ಸಮಿತಿ'ಯ ಸದಸ್ಯರಾಗಿ ಮುಂದುವರಿದರು. ಭೂರಹಿತ ರೈತರಿಗೆ ಸರ್ಕಾರ ಭೂಮಿಯನ್ನು ಹಂಚಬೇಕಾದುದು ನ್ಯಾಯ. ಆದರೆ ಸರ್ಕಾರ ಇದನ್ನು ಮಾಡದೆ ಹೋದಾಗ ಶ್ರೀ ನಾಗಪ್ಪನವರು ತಾವೇ ಮುಂದೆ ನಿಂತು ಈ ಕೆಲಸವನ್ನು ಸಾಧಿಸುವ ಹೋರಾಟಕ್ಕೆ ಅಣಿಯಾದರು.

ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ನವಲಿ ಒಂದು ಹಳ್ಳಿ ನಾಗಪ್ಪನವರು ಸರ್ಕಾರಿ ಜಮೀನನ್ನು ತಮ್ಮ ಕಬ್ಜಾ ಮಾಡಿಕೊಂಡು ಭೂರಹಿತ ರೈತರಿಗೆ ಹಂಚಿದರು. ಆ ಊರ ಕುಲಕರ್ಣಿ ನಾಗಪ್ಪನವರ ಮೇಲೆ ಸುಳ್ಳು complaint ಮಾಡಿದ. ನಾಗಪ್ಪನವರು ತನ್ನನ್ನು ಬಡಿದು ಭೂಮಿಯನ್ನು ಕಬ್ಜಾ ಮಾಡಿಕೊಂಡಿದ್ದಾರೆ ಎಂದು ದೂರಿಕೊಂಡ. ಸರಿ, ನಾಗಪ್ಪನವರು ಎಲ್ಲಿ ಸಿಕ್ಕರೆ ಅಲ್ಲಿ ಬಂಧಿಸುವ ವಾರೆಂಟ್ ಹೊರಟಿತು. ಪೋಲೀಸರು ಹಿಡಿದರೆ ಅಡಗಬಾರದು, ಬಂಧನಕ್ಕೆ ಒಳಗಾಗಬೇಕು ಎನ್ನುವುದು ನಾಗಪ್ಪನವರ ಸಮಾಜವಾದಿ ಸಂಘಟನೆಯ ತತ್ವವಾಗಿತ್ತು. ಆದರೆ ಕುಲಕರ್ಣಿ ಸುಳ್ಳು ಚಾರ್ಜ್‌ಶೀಟ್ ಹಾಕಿಸಿದ್ದರಿಂದ ನಾಗಪ್ಪನವರು ತಾವು ಬಂಧಿತರಾಗಲು ಇಚ್ಛಿಸದೆ, ತಾವು ಮುಂದೆ ಏನು ಮಾಡಬೇಕೆಂದು ತಿಳಿಯಲು ತಮ್ಮ ನಾಯಕ ಖ್ಯಾತ ಸಮಾಜವಾದಿ ಶಾಂತವೇರಿ ಗೋಪಾಲಗೌಡರ ಆದೇಶಕ್ಕಾಗಿ ಅನಂತರಾಮ್‌ಸಿಂಗ್ ಎಂಬುವರನ್ನು ಬೆಂಗಳೂರಿಗೆ ಕಳಿಸಿದರು. ಸುಳ್ಳು ಆರೋಪ ಇದ್ದರೆ ಬಂಧಿತರಾಗದೆ ಹೊರಗಿದ್ದು ಹೋರಾಡಲು ಸೂಚನೆ ಬಂತು. ಕೂಡಲೇ ನಾಗಪ್ಪನವರು ವೇಷ ಬದಲಿಸಿಕೊಂಡು ತಮ್ಮ 1928 ಮಾಡಲ್ಲಿನ ಈಂಡಿಜ ಕಾರಿನಲ್ಲಿ ಗಂಗಾವತಿಗೆ ದೌಡಾಯಿಸಿದರು. ದಾರಿಯಲ್ಲಿ ಪೋಲೀಸರ ಕಣ್ಣಿಗೆ ಬಿದ್ದು ಎಲ್ಲಿ ವಶವಾಗುತ್ತೇನೋ ಎಂಬ ಆತಂಕ ಕಾಡುತ್ತಿತ್ತು. ಆದರೆ ಹಾಗಾಗಲಿಲ್ಲ. ಗಂಗಾವತಿಯಲ್ಲಿ ನೇರವಾಗಿ ಕೋರ್ಟಿಗೆ ಹೋದವರು ಬೇಲ್ ಪಡೆದ ಸುದ್ದಿ ಹೇಗೋ ತಿಳಿದು ದುಂಡಪ್ಪ ಎಂಬ ಮಾನ್ವಿಯ ಪೊಲೀಸ್ ಅಧಿಕಾರಿ ನಾಗಪ್ಪನವರನ್ನು ಮಾನ್ವಿ, ತಹಶೀಲ್ ಕಛೇರಿ ಮುಂದೆ ಬಂಧಿಸಲು ಬಂದ. ನಾಗಪ್ಪನವರು ಬೇಲ್ ಆಜ್ಞೆಯನ್ನು ತೋರಿಸಿದರು. ಆದರೆ ಆತ ನಾಗಪ್ಪನವರನ್ನು ಬಿಡಲು ಒಪ್ಪದ ಡಿ.ಎಸ್.ಪಿ ಅವರಲ್ಲಿಗೆ ಬರಬೇಕು ಎಂದ. ನಾಗಪ್ಪನವರು ಹೆಚ್ಚು ಮಾತು ಬೆಳಸದ ಡಿ.ಎಸ್.ಪಿ ಅವರಲ್ಲಿಗೆ ಹೋದರು. ಡಿ.ಎಸ್.ಪಿ. ಸಾಹೇಬರ ಮುಂದೆ ತಮ್ಮನ್ನು ಕಾನೂನು ವಿರುದ್ಧವಾಗಿ ಬಂಧಿಸುವ ಪ್ರಯತ್ನ ನಡೆದಿದೆ ಎಂದು ದೂರಿದರು. ಪೂರ್ವಾಪರಗಳನ್ನು ನಾಗಪ್ಪನವರ ಮುಖದಿಂದ ತಿಳಿದುಕೊಂಡ ಡಿ.ಎಸ್.ಪಿ. ಅವರು ಬೇಲ್ ಆಜ್ಞೆ ಇರುವಾಗ ಅವರನ್ನು

ತಡೆದುದು ತಪ್ಪು ಎಂದು ಮಾನ್ವಿ ಸಬ್‌ಇನ್‌ಸ್ಪೆಕ್ಟರ್‌ಗೆ ಛೀಮಾರಿ ಹಾಕಿದರಲ್ಲದೆ, ತೊಂದರೆ ಕೊಟ್ಟಿದ್ದಕ್ಕೆ ನಾಗಪ್ಪನವರ ಕ್ಷಮೆ ಕೇಳಿ ಅವರನ್ನು ಬಿಡುಗಡೆ ಮಾಡಿದರು.

ಈ ಘಟನೆಯ ಹಿಂದಿನ ದಿನ ಪೋಲೀಸರು ನಾಗಪ್ಪನವರನ್ನು ಹುಡುಕುತ್ತಾ ಅವರ ಮನೆಗೇ ಬಂದಿದ್ದರು. ನಾಗಪ್ಪನವರು ಆ ಸಮಯದಲ್ಲಿ ಮನೆಯಲ್ಲಿಯೇ ಇದ್ದರೂ ಇಲ್ಲವೆಂದು ಹೇಳಲು ತಮ್ಮ ತಾಯಿಗೆ ಹೇಳಿದ್ದರು. ಪೋಲೀಸ್ ಅಧಿಕಾರಿ ನಾಗಪ್ಪನವರನ್ನು ಕೇಳಿಕೊಂಡು ಬಂದ ಹೊತ್ತಿನಲ್ಲಿ ಆಕೆ ಮನೆಯ ಹೊರಗೆ ಕಟ್ಟೆಯ ಮೇಲೆ ಕುಳಿತಿದ್ದರು. ಪೋಲೀಸ್ ಅಧಿಕಾರಿ ನಾಗಪ್ಪನವರ ಕುರಿತು ಪ್ರಶ್ನಿಸಿದಾಗ ಆಕೆ 'ಹೈದರಾಬಾದಿಗೆ ಹೋಗ್ತಿನಂತ ಇದೇ ಈಗ ಸ್ಟೇಶನ್ ಹ್ವಾದ' ಎಂದು ನುಡಿದರು. ಅದನ್ನು ನಂಬಿದ ಅಧಿಕಾರಿ ರೈಲ್ವೆ ಸ್ಟೇಶನ್ ಕಡೆಗೆ ಓಡಿದ.

ಈ ಸಂದರ್ಭದಲ್ಲಿ ನಾಗಪ್ಪನವರ ಹೋರಾಟ, ಮಿಂಚಿನ ಹರಿದಾಟಗಳಷ್ಟೇ ಮುಖ್ಯವಾಗಿ ಅವರ ತಾಯಿಯವರು ಮಗನ ಗಂಡಾಂತರ ಪರಿಸ್ಥಿತಿಯನ್ನು ಕಣ್ಣಾರೆ ಕಂಡೂ ಕಂಗಾಲಾಗದೆ, ಉಳಿದ ಸಾಮಾನ್ಯ ಸ್ತ್ರೀಯರಂತೆ ಧೃತಿಗೆಡದೆ, ಧ್ವನಿ ನಡುಗದೆ ನಗುನಗುತ್ತ ಮಗನ ಹೋರಾಟವನ್ನು ಬೆಂಬಲಿಸುತ್ತಿರುವ ರೀತಿ ಬೆರಗಾಗಿಸುವಂಥದು. ಇಂತಹ ವೀರಮಾತೆ ಇದ್ದರೆಂದೇ ನಾಗಪ್ಪನವರ ಹೋರಾಟ ಅಚ್ಯುತವಾಗಿ ಮುಂದುವರಿಯಿತೆನ್ನಬೇಕು.

ತಾವು ಯಾವ ಮಹಾಪರಾಧವನ್ನು ಮಾಡದೆ ಪೋಲೀಸರು ಬೆನ್ನು ಹತ್ತಿದ್ದನ್ನು ಪ್ರತಿಭಟಿಸಿ ನಾಗಪ್ಪನವರು ಎಸ್.ಪಿ. ಸಾಹೇಬ ಕಾಗಲ್‌ನ ಉದ್ಧಟತನವನ್ನು ಅಗಿನ ಪ್ರಧಾನಿ ನೆಹರೂ ಅವರಿಗೆ ತಿಳಿಸಿ ಪತ್ರ ಬರೆದರು – 'ಈ ಎಸ್. ಪಿ., ಕಾಗಲ್ ಅಲ್ಲ ಪಾಗಲ್. . . ಈತ ನನ್ನ ಮೇಲೆ ವೈಯಕ್ತಿಕ ಸೇಡು ತೀರಿಸಿಕೊಳ್ಳುತ್ತಿದ್ದಾನೆ' ಎಂದು ಆರೋಪಿಸಿದರು. ಐ.ಜಿ. ಸಾಹೇಬರೇ ಬಂದು ತನಿಖೆ ನಡೆಸಿದರು. ನಾಗಪ್ಪನವರನ್ನು ಕಾಡಿದ ಆ ಅಧಿಕಾರಿ ತಪ್ಪಿತಸ್ಥ ಎಂಬುದು ತನಿಖೆಯಿಂದ ಸಾಬೀತಾಗಿ ತಕ್ಷಣ ಆತನನ್ನು ಸಸ್ಪೆಂಡ್ ಮಾಡಲಾಯಿತು. ಸಸ್ಪೆಂಡ್ ಆಗಬೇಕು, ಇಲ್ಲವೆ ರಜೆ ಮೇಲೆ ಹೋಗಬೇಕು ಎಂದು ಆತನ ಪ್ರಾರ್ಥನೆಗೆ ವಿನಾಯಿತಿ ಕೊಡಲಾಗಿ, ಆತ ರಜೆ ಮೇಲೆ ಹೋದವನು ಮತ್ತೆ ಈ ಕಡೆಗೆ ತಲೆ ಹಾಕದೆ ವರ್ಗವಾಗಿ ಹೋದ. ನಾಗಪ್ಪನವರು ಈ ಇಡೀ ಪ್ರಕರಣದಲ್ಲಿ ನಿರಪರಾಧಿ ಎಂಬುದು ಅನಂತರ ದೃಢಪಟ್ಟಿತು. .

**ನಿಷ್ಠಾವಂತ ಲೋಹಿಯಾವಾದಿ :**

ಶ್ರೀ ನಾಗಪ್ಪನವರ ಸಂಘಟನೆ ಮತ್ತು ಚಳುವಳಿಗಳು ಸಂಪೂಣವಾಗಿ ಲೋಹಿಯಾವಾದದ ತಳಹದಿಯ ಮೇಲೆಯೇ ರೂಪಿತವಾದವುಗಳು. ಡಾ. ಲೋಹಿಯಾ ಅವರ Man Kind ಪತ್ರಿಕೆ, ವಿದ್ಯಾರ್ಥಿದೆಸೆಯಿದಲೂ ನಾಗಪ್ಪನವರ ಪ್ರೀತಿಯ ಪತ್ರಿಕೆಯಾಗಿತ್ತು. ಇದರಲ್ಲಿ ಪ್ರಕಟವಾಗುತ್ತಿದ್ದ ಸಮಾಜವಾದಿ ವಿಚಾರಧಾರೆಯ ಲೇಖನಗಳು ಅವರನ್ನು ವೈಚಾರಿಕವಾಗಿ ಗಟ್ಟಿಗೊಳಿಸಿದವು, ತತ್ವನಿಷ್ಠ ರಾಜಕಾರಣಕ್ಕೆ ಭದ್ರ ಅಡಿಪಾಯ ಹಾಕಿದವು.

ನಾಗಪ್ಪನವರು ಚಳುವಳಿಗೆ ಧುಮುಕಿದ ಕಾಲದಲ್ಲಿ ಗಾಂಧೀಜಿ ಪ್ರಭಾವ, ಕಾಂಗ್ರೆಸ್ ಗಾಳಿ ಬಲವಾಗಿ ಬೀಸುತ್ತಿದ್ದರೂ ನಾಗಪ್ಪನವರು ಅತ್ತ ಒಲಿಯದಿರುವುದು ಅರ್ಥಪೂರ್ಣವಾಗಿದೆ. ನಾಗಪ್ಪನವರ ವ್ಯಕ್ತಿತ್ವವನ್ನು ಓದಿದವರಿಗೆ ಅವರ ಮನೋಧರ್ಮಕ್ಕೆ ಕಾಂಗ್ರೆಸ್ ಧೋರಣೆಗಳು ಒಗ್ಗುವಂತಿರಲಿಲ್ಲ ಎನಿಸುತ್ತದೆ. ಅಂದಿನ ಕಾಂಗ್ರೆಸ್‌ಗೆ ಸ್ವಾತಂತ್ರ್ಯ, ಸ್ವದೇಶಿ ಚಳುವಳಿ ಮುಖ್ಯ ಗುರಿಯಾಗಿತ್ತು. ಸಮಾಜವಾದಿಗಳಿಗೆ ಸಾಮಾಜಿಕ ಸಮತೆ, ಶೋಷಿತರ ಬಗೆಗಿನ ಪ್ರೇಮ ಸ್ವಾತಂತ್ರ್ಯದಷ್ಟೇ ಮುಖ್ಯ ಕಾಳಜಿಯಾಗಿತ್ತು. ಬಡತನದಲ್ಲಿ ಹುಟ್ಟಿ ಬೆಳೆದ ನಾಗಪ್ಪನವರು ಸಾಮಾಜಿಕ ಅಸಮಾನತೆ ಮತ್ತು ಅದರ ಘೋರ ಪರಿಣಾಮಗಳನ್ನು ನವಾಬರ ರಾಜ್ಯದಲ್ಲಿ ಕಂಡು ಕೆರಳಿದವರು. ಹೀಗಾಗಿ ಅವರ ಸ್ವಾಭಿಮಾನದ ಉಜ್ವಲತೆ, ವೈಚಾರಿಕ ನಿಷ್ಠುರತೆ ಮತ್ತು ಹೋರಾಟದ ಉಗ್ರತೆಯನ್ನು, ಆ ರಭಸವನ್ನು ತಾಳಿಕೊಳ್ಳುವ ಶಕ್ತಿಕಾಂಗ್ರೆಸ್‌ನ ಮಂದಗಾಮಿ ಸಂಘಟನೆಗೆ ಇರಲಿಲ್ಲ. ಹಾಗೆಂದು ನಾಗಪ್ಪನವರು ಹಿಂಸಾಮೂಲದ ಕ್ರಾಂತಿಯನ್ನು ಕೈಗೆತ್ತಿಕೊಂಡಲಿಲ್ಲ ಎಂಬುದು ಗಮನಾರ್ಹ ಅಂಶ. ಈ ವಿಶಿಷ್ಟತೆಯಲ್ಲಿಯೇ ನಾಗಪ್ಪನವರ ಸಮಾಜವಾದದ ವಿನೂತನ ಹೆಜ್ಜೆಗಳಿವೆ.

1955ರಲ್ಲಿ ಸಮಾಜವಾದ ಎರಡು ಹೋಳಾಯ್ತು. ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಒಂದು, ಡಾ. ರಾಮಮನೋಹರ ಲೋಹಿಯಾರ ನೇತೃತ್ವದಲ್ಲಿ ಇನ್ನೊಂದು ನಾಗಪ್ಪನವರು ಲೋಹಿಯಾ ಅವರ ಕಟ್ಟಾ ಬೆಂಬಲಿಗರಾಗಿದ್ದರು, ಪಕ್ಷದಲ್ಲಿ ತಲೆದೋರಿದ ವಿವಾದದ ಇತ್ಯರ್ಥಕ್ಕೆ 1953 ರಲ್ಲಿ ಪಕ್ಷದ ಬೃಹತ್ ಸಭೆ ಕರೆಯಲಾಯ್ತು. ಈ ಸಭೆಗೆ ರಾಯಚೂರು ಜಿಲ್ಲೆಯ ಪ್ರತಿನಿಧಿಯಾಗಿ ಪಕ್ಷದ ಜಿಲ್ಲಾಧ್ಯಕ್ಷ ಶ್ರೀ ನಾಗಪ್ಪನವರು ಹೋಗಿದ್ದರು. ಅಲ್ಲಿ ಸಂಧಿಗ್ಧತೆಯ ನಿವಾರಣೆಗೆ ಕೊನೆಯ ಅಸ್ತ್ರವಾಗಿ ಮತಚಲಾವಣೆ ನಡೆದು ಜಯಪ್ರಕಾಶ ನಾರಾಯಣರು ಒಂದು ಮತದ ಅಂತರದಿಂದ ಗೆದ್ದರು (ಡಾ. ಲೋಹಿಯಾ ಅವರಿಗೆ 301, ಜಯಪ್ರಕಾಶರಿಗೆ 302 ಮತಗಳು). ಒಂದು ಮತದ ಸಾಮಾನ್ಯ ಅಂತರ ನಗಣ್ಯವಾಗಿದ್ದು, ಇದು ತಮ್ಮ ಸೈದ್ಧಾಂತಿಕ ನಂಬಿಕೆಯನ್ನು ಅಲುಗಾಡಿಸಬೇಕಿಲ್ಲವೆಂದು ಡಾ. ಲೋಹಿಯಾ ಅವರು ತರ್ಕ ಬದ್ಧವಾಗಿ ವಿಮರ್ಶಿಸಿ ಮುಂದೆ ಒಂದು ವೇದಿಕೆಯಲ್ಲಿ ಮಾತನಾಡಿದರಲ್ಲದೆ, ಸವಿವರ ಲೇಖನವನ್ನೂ ಬರೆದರು. ಜಯಪ್ರಕಾಶರು ಈ ಕಾರಣಕ್ಕೆ ಲೋಹಿಯಾರನ್ನು ಪಕ್ಷದಿಂದ ಸಸ್ಪೆಂಡ್ ಮಾಡಿದರು. ಪಕ್ಷದಿಂದ

ಹೊರಬಿದ್ದ ಲೋಹಿಯಾ ಅವರು ತಾವೇ ಒಂದು ಸಮಾಜವಾದಿ ಪಕ್ಷ ಕಟ್ಟಿ ಅದಕ್ಕೆ 'ಸಂಯುಕ್ತ ಸೋಶಿಯಲಿಸ್ಟ್ ಪಾರ್ಟಿ' (ಎಸ್.ಎಸ್.ಪಿ) ಎಂದು ಕರೆದರು. ಈ ಹೊಸ ಪಕ್ಷದ ಉದ್ಘಾಟನಾ ಸಮಾರಂಭ 1955ರಲ್ಲಿ ಹೈದರಾಬಾದ್‌ನಲ್ಲಿ ನಡೆಯಿತು. ಲೋಹಿಯಾರನ್ನು ಬೆಂಬಲಿಸಿ ನಿಂತ ನಾಗಪ್ಪನವರು ಹೈದರಾಬಾದಿನ ಈ ಸಮಾರಂಭದಲ್ಲಿ ಭಾಗವಹಿಸಿ ಬಂದ ಮೇಲೆ ರಾಯಚೂರು ಜಿಲ್ಲೆಯಾದ್ಯಂತ ಪಕ್ಷದ ಸಂಘಟನೆಗೆ ಅಹೋರಾತ್ರಿ ದುಡಿದರು.

**ತತ್ವನಿಷ್ಠ ಶಾಸಕರು :**

ಹುಟ್ಟು ಹೋರಾಟಗಾರರಾದ ಶ್ರೀನಾಗಪ್ಪನವರು ಜನತೆಯ ಧ್ವನಿಯಾಗಿ ಬೆಳೆದವರು. ಸಮಾಜವಾದಿಯಾಗಿ ಡಾ. ಲೋಹಿಯಾ ಗುಂಪಿನ 'ಸಂಯುಕ್ತ ಸಮಾಜವಾದಿ ಪಕ್ಷ'ವನ್ನು ರಾಯಚೂರು ಜಿಲ್ಲೆಯಾದ್ಯಂತ ಕಟ್ಟಿ ಬೆಳೆಸಿದ ಅವರು ಪ್ರಾಮಾಣಿಕತೆಗೆ, ಸಾಮಾಜಿಕ ಜವಾಬ್ದಾರಿಗೆ, ಪಕ್ಷನಿಷ್ಠೆಗೆ ಇನ್ನೊಂದು ಹೆಸರಾಗಿದ್ದಾರೆ.

ಅಧಿಕಾರದ ಬೆನ್ನು ಹತ್ತಿ ಹೋಗುವುದು ಶ್ರೀ ನಾಗಪ್ಪನವರ ಜಾಯಮಾನದಲ್ಲಿಯೇ ಬರಲಿಲ್ಲ. ಅವರ ನಿಷ್ಠೆ ಸ್ವಲ್ಪವೇ ಅಲ್ಲಾಡಿದ್ದರೂ ಅವರು ರಾಜ್ಯದ ಮುಖ್ಯಮಂತ್ರಿಯೋ ಕೇಂದ್ರದ ಮಂತ್ರಿಯೋ ಆಗಿರುತ್ತಿದ್ದರು. ನಾಗಪ್ಪನವರ ಜೀವನೇತಿಹಾಸದ ಸರಿಯಾದ ಪರಿಚಯವಿರುವವರಿಗೆ ಇದು ಅಕ್ಷರಶಃ ನಿಜ ಎಂದು ಗೊತ್ತು. ಅವರು ಮೌಲ್ಯಕ್ಕೆ ನಿಷ್ಠರಾಗಿ ಶುದ್ಧ ರಾಜಕೀಯವನ್ನು ಅಪ್ಪಿಕೊಂಡರು. ಆದರ್ಶವನ್ನು ನೆಚ್ಚಿ ವ್ಯಾವಹಾರಿಕ ಲಾಭವನ್ನು ಪ್ರಜ್ಞಾಪೂರ್ವಕವಾಗಿ ಆಚೆ ತಳ್ಳಿದರು. ಅದಕ್ಕಾಗಿ ಅವರೆಂದೂ ವಿಷಾದಿಸಲಿಲ್ಲ. ಅವರ ವಿಷಾದ ಏನಿದ್ದರೂ ಇವತ್ತಿನ ರಾಜಕೀಯದಲ್ಲಿ ತುಂಬಿಕೊಂಡಿರುವ ಭ್ರಷ್ಟತೆ ಮತ್ತು ಗುಂಪುಗಾರಿಕೆಗಾಗಿ.1951ರಲ್ಲಿ ಕಾನೂನು ವ್ಯಾಸಂಗ ಮಾಡುತ್ತಿದ್ದಾಗಲೇ ರಾಯಚೂರು ಪುರಸಭೆಗೆ ಸ್ಪರ್ಧಿಸಿ ಆರಿಸಿ ಬರುವುದರ ಮೂಲಕ ರಾಜಕೀಯ ರಂಗದಲ್ಲಿ ಪಾದಾರ್ಪಣೆ ಮಾಡಿದ ಶ್ರೀ ನಾಗಪ್ಪನವರು, 1967ರಲ್ಲಿ ವಿಧಾನಸಭೆಗೆ ತಮ್ಮ 'ಸಂಯುಕ್ತ ಸಮಾಜವಾದಿ ಪಕ್ಷ' ದಿಂದ ಶಾಸಕರಾಗಿ ಆರಿಸಿಹೋದರು. ಅವರು ಶಾಸಕರಾಗಿದ್ದ ಅವಧಿ 1967–71 ಕರ್ನಾಟಕದ ರಾಜಕೀಯ ಇತಿಹಾಸದಲ್ಲೇ ಮಹತ್ವದ್ದು.ವಿಧಾನ ಸಭೆಯ ಕಲಾಪಗಳಿಗೆ ಮಿಂಚಿನ ಸಂಚಾರವನ್ನು ತಂದವರು ನಾಗಪ್ಪನವರು.ಶಾಂತವೇರಿ ಗೋಪಾಲಗೌಡರ ಶಿಷ್ಯರಾಗಿ ಅವರ ಅನುಪಸ್ಥಿತಿಯಲ್ಲಿ ಅವರ ಸ್ಥಾನವನ್ನು ಸಮರ್ಥವಾಗಿ ತುಂಬಿಕೊಟ್ಟ ಹೆಗ್ಗಳಿಕೆ ಅವರದ್ದು.ಇವರು ಅಧಿಕಾರದ ಬೆನ್ನು ಹತ್ತದೆ ಜೀವನ ಪೂರ್ತಿ ಸಮಾಜವಾದಿ ಸಿದ್ಧಾಂತಕ್ಕೆ ಅಂಟಿಕೊಂಡು ಬಾಳಿದ ಧೀಮಂತ ವ್ಯಕ್ತಿಯಾಗಿದ್ದಾರೆ.

**ಪರಾಮರ್ಶಗ್ರಂಥಗಳು**


1. ಡಿ.ಎಸ್ ನಾಗಭೂಷಣ– "ನಮ್ಮ ಸಮಾಜವಾದಿಗಳು –ಕರ್ನಾಟಕದ ಸಮಾಜವಾದಿಗಳ ಪರಿಚಯ" – ಪುಟ ಸಂಖ್ಯೆ : 82–84
2. ಸೂರ್ಯನಾಥ ಕಾಮತ್ – ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು : ಸೂರ್ಯನಾಥಕಾಮತ್ ತೃತೀಯ ಸಂಪುಟ, ಪುಟ ಸಂಖ್ಯೆ : 826–830
3. ಡಾ.ಬಸವಲಿಂಗ ಸೊಪ್ಪಿಮಠ –'ಧೀಮಂತ ಶ್ರೀ ಎಂ.ನಾಗಪ್ಪ ಅವರ ಅಭಿನಂದನ ಗ್ರಂಥ – ಪುಟ ಸಂಖ್ಯೆ :1–10

4.ವಡ್ಡಗೆರೆ ನಾಗರಾಜಯ್ಯ, ಸಮಾಜವಾದಿಗಳ ನೆನಪಿನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ,ಪುಟ ಸಂಖ್ಯೆ 282–288

5. ಬಿ.ಪೀರ್‌ಭಾಷಾ, ಸಮಾಜವಾದಿ ಹೋರಾಟಗಾರರ ಸಂದರ್ಶನ, ಸಂಪುಟ–2 ಪ್ರಸಾರಾಂಗ ,ಕನ್ನಡ ವಿಶ್ವವಿದ್ಯಾಲಯ,ಹಂಪಿ,ಪುಟ–ಸಂಖ್ಯೆ 165–172